ಇ) ಕೊನಜೆ ಸ್ಟೇಷನ್‌ನಿನಲ್ಲಿ ಹೆಚ್ಚುವರಿ ಟ್ರಾನ್ಸ್‌ಫಾರ್ಮರನ್ನು ಹಾಕಿದ ಮೇಲೆ ಅಲ್ಲಿಗೆ ಕನಿಷ್ಟ ಮಟ್ಟದ ಅಗತ್ಯ ಸಿಬ್ಬಂದಿಯನ್ನು ನೇಮಕ ಮಾಡುವ ಯೋಜನೆ ಮಂಡಲಿಗೆ ಇದೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಖಾತೆ ರಾಜ್ಯ ಸಚಿವರು).—ಈಗ ಈ ಎಲ್ಲಾ ತೊಂದರೆಗಳು ಪರಿಹಾರವಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಕ್ಷರೇ, ಈಗ ಸಚಿವರೇ ನನ್ನ ಎಲ್ಲಾ ಪ್ರಶ್ನೆಗಳಿಗೂ ತೊಂದರೆ ಇದೆಯೆಂದು ಒಪ್ಪಿಕೊಳ್ಳುತ್ತಾರೆ. ವಿದ್ಯುತ್ ತೊಂದರೆ ಬಹಳವಾಗಿದೆ. ಶಾಲೆಯಲ್ಲಿ ಓದತಕ್ಕಂಥ ವಿದ್ಯಾರ್ಥಿಗಳಿಗೂ ಕೂಡಾ ಬಹಳ ತೊಂದರೆಯಾಗಿದೆ, ದೀಪ ಕಾಣುವುದೇ ಇಲ್ಲ. ಚಿಮಣಿ ದೀಪ ಕ್ಕಿರತಲೂ ಕಡಿಮೆಯಾಗಿದೆ. ಆದರೂ ಸೆಪ್ಟಂಬರ್‌ನಲ್ಲಿ ಅದನ್ನು ಮಾಡುತ್ತೇವೆಂದು ಹೇಳಿದ್ದೀರಿ. ಈಗ ರಾತ್ರಿಯೂ ವಿದ್ಯುತ್ ಕೊರತೆಯಾಗಿದೆ, ಇಡೀ ರಾತ್ರಿಯೂ ಇರುವುದಿಲ್ಲ. ಈ ರೀತಿ ಪಿತಕ್ಕೆ ಆಗುತಿದೆಯೆಂದು ಗೊತ್ತಾಗುತ್ತಿಲ್ಲ. ಬಹುಶಃ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೇ ಇರುವುದರಿಂದ, ಈ ರೀತಿ ತೊಂದರೆಯಾಗುತ್ತಿರಬಹುದು ಎಂದು ನನ್ನ ಭಾವನೆ. ಈ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಕೊನೆಜೆಯಲ್ಲಿರುವ ಸ್ಟೇಷನ್ನು ಸಿಬ್ಬಂದಿರಹಿತ ಸ್ಟೇಷನ್ ಆಗಿದೆ. ಅಲ್ಲಿ ನಮ್ಮ ಸಿಬ್ಬಂದಿ ಯಾರೂ ಇರುವುದಿಲ್ಲ, ಇಂತಹ ಅನೇಕ ಸ್ಟೇಷನ್‌ಗಳು ನಮ್ಮ ರಾಜ್ಯದಲ್ಲಿವೆ. ಅಲ್ಲಿಗೆ ಹೆಚ್ಚುವರಿ ಟ್ರಾನ್ಸ್‌ಫಾರ್ಮರನ್ನು ಹಾಕಿದ ಮೇಲೆ ಸಿಬ್ಬಂದಿಯನ್ನು ಒದಗಿಸುತ್ತೇವೆ. ಅಲ್ಲಿ ವಿದ್ಯುತ್ ಪೂರೈಕೆ ನಿಂತಾಗ ಪಂಗಳೂರಿನಿಂದ ನಮ್ಮ ಸಿಬ್ಬಂದಿಹೋಗಿ ಕ್ರಮ ಕೈಕೊಳ್ಳಬೇಕಾದಕಾರಣ ಸ್ವಲ್ಪ ತಡವಾಗುತ್ತಿದೆ. ಇನ್ನು ಮುಂದೆ ಅಲ್ಲಿ ಈ ರೀತಿ ತೊಂದರೆ ಆಗದ ರೀತಿಯಲ್ಲಿ ನಾವು ನಿಗಾ ವಹಿಸಿ ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಬಿ.ಎಂ. ಇದಿನಬ್ಬ.—ಈಗ ಈ ಕೊನೆಜೆಯಲ್ಲಿನ ವಿದ್ಯುತ್ ಕೇಂದ್ರಕ್ಕೆ ತಾವು ಜಾಗ್ರತೆ ಸಿಬ್ಬಂದಿಯನ್ನು ನೇಮಕ ಮಾಡಬೇಕು ಮತ್ತು ಅಲ್ಲಿರುವ ವಿದ್ಯುತ್ತಿನ ತೊಂದರೆಯನ್ನು ಕೂಡಲೇ ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಈಗ ಅಲ್ಲಿ ೧೧ ಕೆ.ವಿ. ಫೀಡರಿನ ಬ್ರೇಕರ್ ಜೂನ್ ೧೯೮೭ರಲ್ಲಿ ಕೆಟ್ಟು ಹೋಗಿದೆ, ಈಗ ಅಲ್ಲಿ ಹೊಸಸ್ವಿಚ್ ಗೇರ್ ಹಾಕಲಾಗುತ್ತಿದೆ ಈ ಕೆಲಸ ಸೆಪ್ಟೆಂಬರ್ ತಿಂಗಳ ಕೊನೆಯಲ್ಲಿ ಮುಗಿಯುತ್ತದೆ ಎಂದು ಇಲ್ಲಿ ಹೇಳಿದ್ದರೂ ಸಹ ಈ ಕೆಲಸವನ್ನು ಇನ್ನೂ ಜಾಗ್ರತೆ ಮಾಡಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

I.A.S. Officers In Public Sector Undertakings

62 (400) Sri Patamakki Ratnakar (Thirthahalli).—Will the Minister for large and medium Industries and power pleased to reply for the following question :—

a) The names of the different State Public Undertakings and the Public Undertakings in which there is joint investment by the Govt. and the Private Sector ?

b) The names of the I.A.S. Officers who are working as Chairman and Administrative Directors in State Public Undertakings in which they are working and the dates of their retirement ?

c) The number of them who have been given extension of service ?

d) Whether such extension of service would not be a burden on the Exchequer of the State ?

Sri J.H. Patel (Minister for Large and Medium Industries and Power).—

a) The names of the different Public Undertakings are given in Annexure-I. Private Sector investment any, has been indicated in-Column (I) thereof-

b) As per Annexure-II.

c) Nil

d) Does not arise.

ANNEXURE-I

Sl. No.	Name of the Enterprises	Whether any private investment.
1	Karnataka Cashew Development Corporation Ltd.	No
2	Karnataka Compost Development Corporation Ltd.	,,
3	Karnataka Film Industries Development Corporation Ltd.	Yes
4	Karnataka Fisheries Development Corporation Ltd.	No
5	Karnataka Forest Plantation Corporation Ltd.	,,
6	Karnataka Handloom Development Corporation Ltd.	,,
7	Karnataka Leather industries Devt. Corporation Ltd.	,,
8	Karnataka State Electronic Devt. Corporation Ltd.	,,
9	Karnataka State Handicrafts Devt. Corporation Ltd.	,,
10	Karnataka Industrial Investment Devt. Corporation Ltd.	,,
11	Karnataka State Small Industries Devt. Corporation Ltd.	,,
12	Karnataka State Tourism Devt. Corporation Ltd.	,,
13	Jungle Lodges & Resorts Ltd.	Yes

1	2	3
14	Karnataka Coir Devt Corpn.	No
15	Karnataka Inland Fisheries Corporation.	,,
16	Karnataka SC & ST Development Corporation Ltd.	,,
17	Karnataka Backward Classes & Devt. Corporation Ltd.	,,
18	Karnataka Agro Industries Corporation Ltd.	,,
19	Karnataka Land Army Corporation Ltd.	,,
20	Karnataka State Construction Corporation Ltd.	,,
21	Karnataka State Forest Industries Corporation Ltd.	,,
22	Karnataka State Seeds Corpn. Ltd.	Yes
23	Sree Kanteerava Studios Ltd.	,,
24	Karnataka Truck Terminals Ltd.	,,
25	Karnataka State Police Housing Corporation Ltd.	No
26	Karnataka Food and Civil Supplies Corporation Ltd.	,,
27	Mysore Sales International Ltd.	,,
28	Karnataka Silk Marketing Board.	,,
29	Marketing Consultants and Agencies Ltd.	,,
30	Bangalore Animal Food Corpn. Ltd.	,,
31	Chamundi Machine Tools Ltd.	,,
32	Karnataka Implements and Machineries Co. Ltd.	,,
33	Karnataka Silk Industries Corpn. Ltd.	,,
34	Karnataka Soaps and Detergents Ltd.	,,
35	Karnataka Agro Corn Products Ltd.	,,

1	2	3
36	Karnataka Vidyut Kharkhane Ltd.	No
37	The Mysore Chrome Tanning Co. Ltd.	Yes
38	Mysore Cosmetics Ltd.	No
39	Mysore Elecrical Industries Ltd.	,,
40	Mysore Lac and Paint Works Ltd.	Yes
41	Mysore Minerals Ltd.	No
42	Mysore Paper Mills Ltd.	Yes
43	Mysore Sugar Co. Ltd.	,,
44	Mysore Tobacco Co. Ltd.	,,
45	N.G.E.F. Ltd.	,,
46	The Hutti Gold Mines Co. Ltd.	,,
47	Visvesvaraya Iron and Steel Ltd.	No
48	Karnataka Power Corpn. Ltd.	,,
49	Mysore Match Co Ltd.	Yes
50	Karnataka State Veneers Ltd.	,,
51	Karnataka Telecom Ltd.	No
52	Karnataka State Financial Corpn.	,,
53	Karnataka State Road Transport Corporation.	,,
54	Karnataka State Warehousing Corpn.	,,
55	Karnataka Electricity Board	,,
56	Mysore Acetate & Chemicals Co. Ltd.	Yes
57	Karnataka Agro Proteins Ltd.	,,
58	Mysore Lamp Works Ltd	,,

ANNEXURE-II

Sl No.	Name of I.A.S. Officers	Name of Post & the State Public Undertaking	Date of retirement
1	2	3	4
	Shri/Smt		
1	M.K. Venkata Ramegowda	M.D. Karnataka State Small Industries Development Corporation Bangalore	30-4-1988
2	B.S. Patil	M.D. Karnataka Co-Op. Milk producers Federation Ltd, Bangalore	31-1-2002
3	S.M. Pattanaik	M.D. Karnataka Silk Industries Corpn. B'lore.	30-9-2002
4	Y.K. Puttasomegowda	M.D. Karnataka State Financial Corporation	30-9-1992
5	N. Viswanathan	M.D. Vikrant Tyres Ltd., Mysore	30-6-2000
6	L.B. Manikatti	M.D. Karnataka Handicrafts Development Corporation, Bangalore.	31-8-1988
7	M.B. Prakash	M.D. Karnataka Power Corporation B'lore.	30-4-2002
8	P.P. Prabhu	V.C. and M.D. KSRTC, Bangalore.	31-5-1998
9	M. Jairaj	M.D, Mysore Acetate & Chemicals Limited, B'lore.	31-7-1989
10	N.K. Prabhakar Rao	C & M.D. NGEF, Bangalore.	31-10-1991
11	Smt. M. Shamim Banu	M.D. Karnataka State Handloom Development Corporation, Bangalore	31-1-2010
12	Dr. P.J. Nayak	M.D. Karnataka Agro Industries Corpn, B'lore.	31-7-2005
13	Bulla Subba Rao	C & M.D Mysore Minerals Ltd, Bangalore.	30-6-2003
14	M.N. Vidyashankar	Director, Bangalore Dairy, B'lore	31-1-2012
15	K.P. Surendranath	C & M.D, Mysore Paper Mills Ltd., Bangalore	31-11-1988
16	P. Putta Rangappa	M D. Karnataka SC & ST Development Corpn. Bangalore.	31-8-1988

1	2	3	4
17	M. Honnagange Gowda	M.D. Karnataka Warehousing Corpn. B'lore.	31-5-1988
18	Falguni Rajkumar	M.D. Mysore Electrical Industries Ltd., B'lore.	31-1-2007
19	S.B. Muddappa	C & M.D. Karnataka State Industries Investment Development Corporation, Bangalore.	31-12-1995
20	C. Muniswamy	Director & M.D. Mysore Lamp Works Ltd., Bangalore.	31-5-2000
21	P.G. Nayak	General Manager, Karnataka Food & Civil Supplies Corporation, Bangalore.	31-7-2005
22	R. Sridharan	Executive Director, KSRTC, Bangalore.	30-9-2015
23	S.K. Ghosal	C & M.D. Karnataka Soaps & Detergents Ltd. Bangalore.	31-10-1997

PART-TIME CHAIRMAN

1	J.P. Sharma	Karnataka State Seeds Corporation Ltd,,	30-6-2001
2	P.P. Prabhu	Karnataka Implements & Machineries Co. Ltd.,	31-5-1998
3	Dr. P.J. Naik	Karnataka Compost Devt. Corpn. Ltd.,	31-7-2005
4	J. Alaxander	Karnataka Police Housing Corporation Ltd.,	31-8-1996
5	M. Shankaranarayanan	Karnataka State Financial Corporation	31-12-1992
6	H. Nagaraja Shetty	Mysore Sugar Company Limited	30-9-1998
7	Achala Moulik	Karnataka State Veeners Limited	31-7-1999
8	S.B. Muddappa	Mysore Sales International Limited	31-12-1995
9	S.B. Muddappa	Mysore Cosmetics Limited	31-12-1995
10	K.S.N. Murthy	Hutti Gold Mines Limited	31-5-1990
11	T.R. Satish Chandran	Visvesvaraya Iron & Steel Limited	30-4-1997
12	J.P. Sharma	Mysore Tabacco Company Limited	30-6-2001

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಇಲ್ಲಿ ಮಾನ್ಯ ಸದಸ್ಯರು ಕೇಳಿರುವಂತಹ (ಎ) ಮತ್ತು (ಬಿ) ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಅನುಬಂಧ (೧) ಮತ್ತು ಅನುಬಂಧ (೨) ರಲ್ಲಿ ವಿವರಗಳನ್ನು ಕೊಡಲಾಗಿದೆ. ಇದೆಲ್ಲವನ್ನೂ ಓದಿ ಹೇಳಬೇಕಾದರೆ ಹತ್ತು ನಿಮಿಷವಾದರೂ ಬೇಕಾಗುತ್ತದೆ.

ಅಧ್ಯಕ್ಷರು.—ಹಾಗಿದ್ದರೆ ಆ ವಿವರಗಳನ್ನು ತಾವು ಸಭೆಯ ಮುಂದಿಟ್ಟರೆ ಸಾಕು.

ಶ್ರೀ ಜೆ. ಹೆಚ್. ಪಟೇಲ್.—ಆಗಬಹುದು, ವಿವರಗಳನ್ನು ಸಭೆ ಮುಂದಿಡುತ್ತೇನೆ ಮತ್ತೆ ಮಾನ್ಯ ಸದಸ್ಯರು ಎಷ್ಟು ಅಧಿಕಾರಿಗಳಿಗೆ ಸೇವಾ ವಿಸ್ತರಣ ಅನುಮತಿ ನೀಡಲಾಗಿದೆ ಎಂದು ಕೇಳಿದ್ದಾರೆ. ನಮ್ಮ ರಾಜ್ಯದ ಚೀಫ್-ಸೆಕ್ರೆಟರಿ ಅವರಿಗೆ ಮಾತ್ರ ಸೇವಾ ವಿಸ್ತರಣೆಗೆ ಅನುಮತಿ ನೀಡಲಾಗಿದೆ. ಇವರು ವಿ. ಐ. ಎಸ್. ಎಲ್. ನಲ್ಲಿ ಪಾರ್ಟ್-ಟೈಮ್ ಚೇರ್‌ಮನ್ ಆಗಿದ್ದಾರೆಂಬ ಕಾರಣದಿಂದ ಸೇವಾ ವಿಸ್ತರಣೆಗೆ ಅನುಮತಿ ನೀಡಿಲ್ಲ. ಇವರು ಚೀಫ್-ಸೆಕ್ರೆಟರಿ ಆಗಿದ್ದಾರೆಂಬ ಕಾರಣದಿಂದ ಸೇವಾ ವಿಸ್ತರಣೆಗೆ ಅನುಮತಿ ನೀಡಲಾಗಿದೆ. ಈ ಒಂದು ಪ್ರಕರಣ ಬಿಟ್ಟರೆ ಬೇರೆ ಯಾರಿಗೂ ಸೇವಾ ವಿಸ್ತರಣೆಗೆ ಅನುಮತಿ ನೀಡಿಲ್ಲ. ಈ ೩೫ ಜನ ಐ. ಎ. ಎಸ್. ಅಧಿಕಾರಿಗಳ ಪೈಕಿ ೩-೪ ಜನ ಅಧಿಕಾರಿಗಳು ಮಾತ್ರ ತಮ್ಮ ತಮ್ಮ ಇಲಾಖೆಗಳ ಕೆಲಸಗಳಜೊತೆಗೆ ಮೇನೇಜಿಂಗ್ ಡೈರೆಕ್ಟರ್ ಮತ್ತು ಅಧ್ಯಕ್ಷರಾಗಿ ಸಹ ಕೆಲಸ ಮಾಡುತ್ತಿದ್ದಾರೆ.

ಶ್ರೀ ಪಟಮಕ್ಕಿ ರತ್ನಾಕರ.—ಮಾನ್ಯ ಅಧ್ಯಕ್ಷರೇ, ವಿವಿಧ ನಿಗಮಗಳ ಮತ್ತು ಇಲಾಖೆಗಳ ಐ. ಎ. ಎಸ್. ಅಧಿಕಾರಿಗಳನ್ನು ಮತ್ತು ನಿರ್ದೇಶಕರುಗಳನ್ನು ನಿಯಮಿಸಿದ್ದೀರಿ. ಹೀಗೆ ನಿಯಮಿಸಿದ್ದರೂ ಕೂಡ ಇಲಾಖೆ ಮತ್ತು ಉದ್ಯಮಗಳಲ್ಲಿ ನಷ್ಟ ಸಂಭವಿಸತಕ್ಕದ್ದೆ ಸರ್ಕಾರದ ಗಮನಕ್ಕೆ ಬಂದಿದೆಯೇ ? ಐ. ಎ. ಎಸ್. ಅಧಿಕಾರಿಗಳನ್ನು ಈ ರೀತಿ ನೇಮಿಸುವುದರಿಂದ ಸುಧಾರಣೆ ಆಗುತ್ತದೆ ಎನ್ನತಕ್ಕ ನಮ್ಮ ಭಾವನೆ ತಪ್ಪಾಗುತ್ತದೆ. ಇಂತಹ ಸಮಯದಲ್ಲಿ ತಾಂತ್ರಿಕ ತಜ್ಞರನ್ನು ಈ ಇಲಾಖೆಯ ಅಧ್ಯಕ್ಷರು ಮತ್ತು ನಿರ್ದೇಶಕರನ್ನಾಗಿ ನೇಮಿಸತಕ್ಕ ಆಲೋಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಜೆ. ಹೆಚ್. ಪಟೇಲ್.—ಐ. ಎ. ಎಸ್ ಅಧಿಕಾರಿಗಳನ್ನು ಅಧ್ಯಕ್ಷರು ಮತ್ತು ನಿರ್ದೇಶಕರನ್ನಾಗಿ ಹಾಕುವುದರಿಂದ ಉದ್ಯಮಗಳಲ್ಲಿ ನಷ್ಟ ಉಂಟಾಗುತ್ತದೆ ಎಂಬುದನ್ನು ನಾನು ಒಪ್ಪುವುದಿಲ್ಲ. ಕೆಲವೊಂದು ನಿರ್ದೇಶಕರು ಇರತಕ್ಕ ಕಾರ್ಖಾನೆಗಳು ನಷ್ಟ ಆಗಿವೆ. ನಷ್ಟ ಆಗುವುದಕ್ಕೆ ಹಲವಾರು ಕಾರಣ ಇರಬಹುದು. ನಾನ್ ಅವೈಲಬಿಲಿಟಿ ಆಫ್ ರಾಮೆಟೀರಿಯಲ್, ಎಕ್ಸ್‌ಪೋರ್ಟ್ ಮತ್ತು ಇಂಪೋರ್ಟ್ ಪಾಲಿಸಿಯಿಂದ ಹೀಗೆ ಹಲವಾರು ಕಾರಣಗಳಿಂದ ನಷ್ಟ ಆಗಬಹುದು. ಆದರೆ ಉದ್ಯಮಗಳನ್ನು ಸುಧಾರಣೆ ಮಾಡುವುದಕ್ಕೆ ಬ್ಯೂರೋಕ್ರಾಟ್ಸ್ ಮತ್ತು ಟೆಕ್ನೋಕ್ರಾಟ್ಸ್ ಹಾಕಬೇಕು ಎನ್ನುವುದು ಸರ್ಕಾರದ ಆಲೋಚನೆಯಲ್ಲಿದೆ. ಒಂದೊಂದು ಉದ್ಯಮದಲ್ಲಿ ಉತ್ತಮ ತಂತ್ರಜ್ಞರನ್ನು ನಿರ್ದೇಶಕರನ್ನಾಗಿ ಮಾಡಬೇಕು. ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಸ್ಟೇಟ್‌ನದು ಇಲ್ಲಿ ಕೆಲಸ ಮಾಡುತ್ತಿದೆ. ಈ ಬ್ಯೂರೋನಿಂದ ಒಂದು ಪಟ್ಟಿಯನ್ನು ತಯಾರು ಮಾಡುತ್ತೇವೆ. ಎಲ್ಲಾ ಕಡೆ ತಂತ್ರಜ್ಞರು ಇರಬೇಕೆಂದು ಏನೂ ಇಲ್ಲ. ಕೆಲವು ಕಡೆ ತಂತ್ರಜ್ಞರು ಇದ್ದರೂ ಸಹ ಅವರು ಇದ್ದ ಕಾರ್ಖಾನೆಗಳಲ್ಲಿ ಲುಕ್ಸಾನು ಆಗಬಹುದು. ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಈ ವಿಷಯವು ಕೇಂದ್ರ ಸರ್ಕಾರದವರ ಆಲೋಚನೆಯಲ್ಲಿಯೂ ಕೂಡ ಇದೆ. ಈ ಬಗ್ಗೆ ಅವರೂ ಸಹ ಏನು ಮಾಡಬೇಕು ಎಂದು ಪ್ರಯತ್ನ ಮಾಡುತ್ತಾ ಇದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಟೆಕ್ನೋಕ್ರಾಟ್ಸ್ ಇದ್ದರೂ ಸಹ ಇದರ ಬಗ್ಗೆ ಗಮನ ಕೊಟ್ಟಿಲ್ಲ. ಹೋದ ವರ್ಷ ಕೂಡ ಈ ಪ್ರಶ್ನೆಗೆ ಉತ್ತರ ಹೀಗೆ ಹೇಳಿದ್ದಿರಿ. Technocratsನ್ನು appoint ಮಾಡುತ್ತೇವೆಂದು ಹೇಳಿದ್ದೀರಿ. ಒಂದು ವರ್ಷ ಆಗುತ್ತಾ ಬಂದು, ಇನ್ನೂ ಆಗಿಲ್ಲ. Technocrats ಇದ್ದಾರೆ ಆದರೂ ಐ. ಎ. ಎಸ್. ಅಧಿಕಾರಿಗಳನ್ನು ಐ. ಪಿ. ಎಸ್. ಅಧಿಕಾರಿಗಳನ್ನು ಮೊದಲಿನಿಂದ ಹಾಕಿದ್ದೀರಿ. Administration ನಲ್ಲಿ ಛಾನ್ಸ್ ಕೊಡಬೇಕು. ಬೋಲ್ಟ್ ಹಾಗೂ ನಲ್ಟ್ ಏನೂ ಗೊತ್ತಿಲ್ಲದೇ ಇರತಕ್ಕ ಟೆಕ್ನೋಕ್ರಾಡ್ಸ್ ಇದ್ದರೆ ಇವರು ಇರಲಿ, ಪರವಾಗಿಲ್ಲ. ಅವರನ್ನು ಮೇಲೆ ಕೂರಿಸಿ ಕೆಳಗಡೆ ಇರುವವರಿಗೆ ಛಾನ್ಸ್ ಕೊಡದೇ ಇರುವುದಕ್ಕೆ ಏನು ಔಚಿತ್ಯ ಇದೆ.

ಶ್ರೀ ಜೆ. ಹೆಚ್. ಪಟೇಲ್.—ಈಗ ಒಂದು ಉದಾಹರಣೆ ಕೊಡುತ್ತೇನೆ. ಈಗ ವಿಶ್ವೇಶ್ವರಯ್ಯ ಐರನ್ ಮತ್ತು ಸ್ಟೀಲ್ ಇಂಡಸ್ಟ್ರಿಯಲ್ಲಿ Managing Director is a technocrat. ಆದರೆ ಅವರಿಗೆ ಆ ವಿಷಯ ಗೊತ್ತಿಲ್ಲ. ಅಲ್ಲಿರತಕ್ಕ ಛೇರ್ಮನ್ ಐ. ಎ. ಎಸ್. ಅಧಿಕಾರಿ. ಸಾಮಾನ್ಯವಾಗಿ ಸೋಪು, ಕಾಗದ, ಇರುವ ಕಾರ್ಖಾನೆಗಳಲ್ಲಿ ಎಂ. ಡಿ, ಛೇರ್ಮನ್ ಇರುತ್ತಾರೆ. ಎನ್. ಜಿ. ಇ. ಎಫ್ ಲಾಭ ಮಾಡತಕ್ಕ ಕಂಪನಿ. ಆದರೆ ಅಲ್ಲಿ ಟೆಕ್ನೋಕ್ರಾಟ್ಸ್‌ಗೆ ಬೋಲ್ಟ್ ನಲ್ಟ್ ವಿಷಯ ಗೊತ್ತಿಲ್ಲದಿದ್ದರೂ, ಅದನ್ನು ತಿರುಗಿಸುವುದಕ್ಕೆ ಎಷ್ಟು ಹಣ ಬೇಕಾಗುತ್ತದೆ ಎಂದು ಗೊತ್ತಿರುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಐ. ಎ. ಎಸ್. ಅಧಿಕಾರಿಗಳನ್ನು ನೇಮಿಸಿದ್ದೀರಿ. ಅವರು ಸೂಪರ್ ಹ್ಯೂಮನ್ ಬೀಯಿಂಗ್, ಅವರನ್ನು ನೇಮಿಸಿದ ಮೇಲೆ ಯಾವ್ಯಾವುದು ಸಂಸ್ಥೆ ಲುಕ್ಸಾನು ಆಗಿದೆ, ಅದೆಲ್ಲಾ ಫಾಯಿದೆ ಆಗಿದೆಯೇ ? ಐ. ಎ. ಎಸ್. ಅಧಿಕಾರಿಗಳನ್ನ್ ಹಾಕುವುದರಿಂದ ಎಲ್ಲಾ ಕಡೆ ಲಾಭ ಆಗುವುದಿದ್ದರೆ ಹಾಕಿ. ಇಲ್ಲದಿದ್ದರೆ ಇದನ್ನು ಬಿಟ್ಟು ಬೇರೆ ಮಾರ್ಗ ಹುಡುಕುವುದಕೆ ಯಾಕೆ ಪ್ರಯತ್ನ ಮಾಡಲಿಲ್ಲ ?

ಶ್ರೀ ಜೆ. ಹೆಚ್. ಪಟೀಲ್.—ನಾವು ಪ್ರಯತ್ನ ಮಾಡುತ್ತಾ ಇದ್ದೇವೆ. ಈಗ ವಿಕ್ರಾಂತ್ ಟೈರ್ಸ್ ಲುಕ್ಸಾನು ಆಗಿತ್ತು ಆಲ್ಲಿ ಶ್ರೀ ಪ್ರಭು ಎಂಬ ಐ. ಎ. ಎಸ್ ಅಧಿಕಾರಿಗಳನ್ನು ಹಾಕಿದೆವು. ಈಗ ಅಲ್ಲಿನ ಮ್ಯಾನೇಜ್‌ಮೆಂಟ್ ಮೂರು ವರ್ಷದಿಂದ ಚೆನ್ನಾಗಿದೆ. ಈ ವರ್ಷ ಲಾಭ ಕೂಡ ಮಾಡಿದ್ದಾರೆ. ಹಾಗೆಯೇ ಮೈಸೂರು ಎಲೆಕ್ಟ್ರಿಕಲ್ಸ್ ಕಾರ್ಖಾನೆ ಇದೆ. ಅಲ್ಲಿ ಒಬ್ಬ ರಾಜಕುಮಾರ್ a very efficient young man. ಎಂಬ ಐ. ಎ. ಎಸ್. ಅಧಿಕಾರಿಯನ್ನು ಹಾಕಿದೆವು. ಅಲ್ಲೂ ಲಾಭ ಬಂದಿದೆ. ಅದೇ ರೀತಿ ಮೈಸೂರು ಲ್ಯಾಂಪ್ಸ್‌ನಲ್ಲಿ ಶ್ರೀ ಕೆ. ಸಿ. ಎನ್. ಮೊರ್ತಿ ಎಂಬ ಐ. ಎ. ಎಸ್ ಅಧಿಕಾರಿ ಛೇರ್ಮನ್ ಇದ್ದಾರೆ. ಅಲ್ಲೂ ಸಹ ಲಾಭ ಮಾಡಿದ್ದೇವೆ. ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಲುಕ್ಸಾನಿನಲ್ಲಿತ್ತು. ಶ್ರೀ ದಾತಾರ್. ಐ. ಎ. ಎಸ್ ಆಫೀಸರ್ ಅವರು ಅಲ್ಲಿಗೆ ಹೋದಮೇಲೆ ಲಾಭ ಮಾಡಿದೆ. ಹೀಗೆ ಲಾಭ ಮಾಡಿರುವ ಹಲವಾರು ಸಂಸ್ಥೆಗಳಿವೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಸಿವಿ ಐ.ಎ.ಎಸ್. ಆಫೀಸರ್ಸ್ ಅಧ್ಯಕ್ಷರು ಮತ್ತು ಆಡಳಿತ ನಿರ್ದೇಶಕರು ಎಂದು ಹೇಳಿದಿರಿ. ಅವರು ಆಡಳಿತ ನಿರ್ದೇಶಕರೋ ಅಥವಾ ಎಕ್ಸಿಕ್ಯೂಟೀವ್ ಡೈರೆಕ್ಟರೋ ಅಥವಾ ಡೈರೆಕ್ಟರೋ ಎನ್ನುವುದನ್ನು ತಿಳಿಸಿ.

ಶ್ರೀ ಜೆ. ಹೆಚ್. ಪಟೀಲ್.—ಮ್ಯಾನೇಜಿಂಗ್ ಡೈರಕ್ಟರ್.

ಶ್ರೀ ಎಂ. ಎಸ್. ಕೃಷ್ಣನ್.—ಇದರಲ್ಲಿ ಏನಾಗಿದೆಯೆಂದರೆ, ಕೆಲವು ಐ.ಎ.ಎಸ್. ಅಧಿಕಾರಿಗಳು ಆಡಳಿತಾಧಿಕಾರಿಗಳಾಗಿರುತ್ತಾರೆ, ಇನ್ನು ಕೆಲವು ಅಧಿಕಾರಿಗಳು ಬೇರೆ ಕಡೆ ಇರುವವರು ಇಲ್ಲಿರುತ್ತಾರೆ. ೨–೩ ಐ.ಎಎಸ್. ಆಫೀಸರ್ಸ್ ಬೋರ್ಡ್ ಆಫ್ ಡೈರಕ್ಟರ್ಸ್ ಆಗಿರುತ್ತಾರೆ. ಆದ್ದರಿಂದ ಅದನ್ನು ತಪ್ಪಿಸಿ, ನಿರ್ದಿಷ್ಟವಾಗಿ ಯಾವ ಅಧಿಕಾರಿ ಜವಬ್ದಾರಿ ವಹಿಸಿಕೊಳ್ಳುತ್ತಾರೋ ಅಂತಹವರು ಮಾತ್ರ ಇರುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ? ಎರಡನೆಯದು, ಆ ಅಧಿಕಾರಿಗಳು ಬೇಗ ಬೇಗ ಟಾನ್ಸ್‌ಫರ್ ಆಗುತ್ತಾರೆ. ಅದನ್ನು ಮಾಡಬೇಡಿ. ಟಿಕ್ಕೊಕ್ಕಾಟ್ಸ್ ವರ್ಸಸ್ ಬ್ಯೂರೆಕ್ಕಾಟ್ಸ್ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ವರ್ಷಕ್ಕೆ, ಎರಡು ವರ್ಷಕ್ಕೆ ಅಧಿಕಾರಗಳನ್ನು ಬದಲಾವಣೆ ಮಾಡುವುದಕ್ಕೆ ಹೋಗಬೇಡಿ. ಸೆಂಟ್ರಲ್ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನವರು ಚರ್ಚೆಮಾಡಿ ರೆಕಮೆಂಡೇಷನ್ ಮಾಡಿದ್ದಾರೆ. ಆ ರೀತಿ ಮಾಡಕೂಡದು, ಜವಾಬ್ದಾರಿ ವಹಿಸಿಕೊಳ್ಳತಕ್ಕಂಥವರನ್ನು ಸ್ಥಳಾಂತರ ಮಾಡಕೂಡದು ಎಂದು ಹೇಳಿದ್ದಾರೆ. ಆ ರೀತಿ ಮಾಡಿದ್ದೀರಾ ?

ಶ್ರೀ ಜೆ. ಹೆಚ್. ಪಟೀಲ್.—ಈ ಬಗ್ಗೆ ಕೇಂದ್ರ ಸರ್ಕಾರದ ರೀತಿಯಲ್ಲಿ ನಮ್ಮ ಸರ್ಕಾರ ಯೋಚನೆ ಮಾಡಿದೆ. ಯಾವ ಐ.ಎ.ಎಸ್. ಅಧಿಕಾರಿಗಳು ಉದ್ಯಮದ ಕಡೆ ಹೋಗುತ್ತಾರೋ ಮತ್ತೆ ಇಲಾಖೆಗೆ ಹೋಗುತ್ತಾರೋ ಎಂಬುದನ್ನು ಆಫ್ ಮಾಡಿಕೊಳ್ಳಬೇಕು. ನಾನು ಇಂಡಸ್ಟ್ರೀಸ್‌ನಲ್ಲಿ ಕಂಟಿನ್ಯೂ ಆಗುತ್ತೇನೆ ಎಂದು ಹೇಳಬಹುದು. ಆದ್ದರಿಂದ ಅವರ ಬಗ್ಗೆ ಕೇಂದ್ರದ ಆದೇಶ ಬರಬೇಕು. ನಮ್ಮ ಸರ್ಕಾರದಲ್ಲಿ ಐ.ಎ.ಎಸ್. ಅಧಿಕಾರಿಗಳನ್ನು ಕಾರ್ಖಾನೆಯಲ್ಲಿ ಬರುತ್ತೀರೋ ಮತ್ತೆ ಇಲಾಖೆಗೆ ಬರುತ್ತೀರೋ ಎಂದು ಕೇಳಿ ಆಪ್ಷನ್ ತೆಗೆದುಕೊಳ್ಳಲಿಕ್ಕೆ ಹೊಗಿಲ್ಲ. ಇನ್ನು ಮಾನ್ಯ ಸದಸ್ಯರ ವಿಚಾರ ಏನಿದೆ, ಯಾರು ಒಂದು ವರ್ಷ, ಎರಡು ವರ್ಷ ಇರುತ್ತಾರೆ, ಲುಕ್ಸಾನು ಆದತಕ್ಷಣ ಬೇರೆ ಕಡೆ ಹೋಗುತ್ತಾರೆ ಎಂದು, ಆ ಒಂದು ದೋಷವನ್ನು ನಾವು ಗಮನಿಸಿದ್ದೇವೆ.

ಶ್ರೀ ಪಟಮಕ್ಕಿ ರತ್ನಾಕರ್.—ಸುಮಾರು ೩೫ ಜನ ಐ ಎ ಎಸ್ ಆಫೀಸರ್ಸ್ ಇರುವುದನ್ನು ಸದನಕ್ಕೆ ತಿಳಿಸಿದ್ದೀರಿ. ಐ.ಎ.ಎಸ್. ಆಫೀಸರ್ಸ್ ಸರ್ವರೋಗ ಸಂಜೀವಿನಿ ಆಲ್ಲ ಎಂದು ಮಾನ್ಯ ಮಂತ್ರಿಗಳಿಗೆ ಮನದಟ್ಟಾಗಿದೆಯೇ ? ಕೆಲವು ಅಧಿಕಾರಿಗಳು ಲಾಭ ಮಾಡಿದರು ಎಂದು ತಿಳಿಸಿದರು. ಐ.ಎ.ಎಸ್. ಅಧಿಕಾರಿಗಳನ್ನು ಆಗಿಂದಾಗ್ಗೆ ೨–೩ ವರ್ಷಕ್ಕೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾವಣೆ ಮಾಡುತ್ತಾ ಇದ್ದರೆ, ಅವರಿಗೆ ಕೂಡ ಇಲಾಖೆಯಲ್ಲಾಗಲೀ, ಉದ್ಯಮಗಳಲ್ಲಾಗಲೀ ದಕ್ಷತೆ ಯಿಂದ ಕಾರ್ಯ ನಿರ್ವಹಿಸಲಿಕ್ಕೆ ಮತ್ತು ಪೂರ್ಣ ಜ್ಞಾನವನ್ನು ಹೊಂದಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಕೂಡ ಸರ್ಕಾರ ಮುಖ್ಯವಾಗಿ ಗಮನಹರಿಸಬೇಕು. ಹಾಲಿನ ಡಿಪಾರ್ಟ್‌ಮೆಂಟ್‌ನಲ್ಲಿರುವವರನ್ನು ಇನ್ನೊಂದು ಡಿಪಾರ್ಟ್‌ಮೆಂಟ್‌ಗೆ ಹಾಕುತ್ತಾರೆ. ಯಾವುದೋ ಕಾರ್ಪೊರೇಷನ್‌ನಲ್ಲಿರುವವರನ್ನು ವಾರಾಹಿ ಜಲ ವಿದ್ಯುತ್ ಯೋಜನೆಗೆ ಹಾಕುತ್ತಾರೆ. ಅವರಿಗೆ ವಿಷಯ

ಗೊತ್ತಿರುವುದಿಲ್ಲ, ವಿಷಯ ತಿಳಿದುಕೊಳ್ಳುವುದಕ್ಕೇ ಎರಡು ವರ್ಷ ಬೇಕಾಗುತ್ತದೆ. ಆಂಥಾದ್ದರ ಬಗ್ಗೆ ಜವಾಬ್ದಾರಿಯುತವಾಗಿ ತೀರ್ಮಾನ ತೆಗೆದುಕೊಳ್ಳಬೇಕು. ಮೂರನೆಯ ಪ್ರಶ್ನೆಯಲ್ಲಿ ಎಕ್ಸ್‌ಟೆನ್‌ಷನ್ ಆಫ್ ಸರ್ವೀಸ್ ಬಗ್ಗೆ ಕೇಳಿದ್ದಕ್ಕೆ 'ನಿಲ್' ಎಂದು ಹೇಳಿದ್ದೀರಿ. ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್‌ನಲ್ಲಿ ಮಾನ್ಯ ದಾತಾರ್ ಏನಿದ್ದಾರೆ ಅವರು ನಿವೃತ್ತಿಯಾಗುವ ಹಂತಕ್ಕೆ ಬಂದಿದ್ದಾರೆ. ಅವರಿಗೆ ಮತ್ತೆ ೫ ವರ್ಷ ಎಕ್ಸ್‌ಟೆನ್‌ಷನ್ ಕೊಡತಕ್ಕ ತೀರ್ಮಾನ ಮಾಡಿದ್ದಾರೆಯೇ ? ಕರ್ನಾಟಕ ಸರ್ಕಾರದಿಂದ ನಿಗದಿ ಮಾಡಲ್ಪಟ್ಟ ಈ ಕೆಳಗೆ ತಿಳಿಸಿರುವ ಸಂಭಾವನೆ ಮತ್ತು ಪರತ್ತು ನಿಬಂಧನೆಗಳಿಗೆ ಮೇರೆಗೆ ಮಾರ್ಚ್ ೪, ೧೯೮೭ ರಿಂದ ೫ ವರ್ಷ ಅ ಕಂಪನಿಗೆ ಅಧ್ಯಕ್ಷರು ಮತ್ತು ನಿರ್ದೇಶಕ ಎಂದು ಪುನರ್ನೇಮಕ ಮಾಡಲು ಒಪ್ಪಿಗೆ ಇದೆ ಎಂದು ಆ ಹೇಳಿದ್ದೀರಿ. ಜೊತೆಗೆ ನಮ್ಮ ನಾಯಕಿಯವರು ಹೇಳಿದಹಾಗೆ, ಅಧಿಕಾರಿಗಳನ್ನು ವಿದೇಶಕ್ಕೆ ಕಳಿಸಿ, ಅವರು ಬಂದ ತಕ್ಷಣ ಮತ್ತೆ ಅವರನ್ನು ವರ್ಗಾವಣೆ ಮಾಡಿರತಕ್ಕಂಥಾದ್ದು ಏನಿದೆ ಅದರ ಬಗ್ಗೆ ತಾವು ಹೇಳಬೇಕು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಎಂ.ಸಿ.ಎಫ್. ಸರ್ಕಾರದ ಕಂಪನಿ ಅಲ್ಲ. ಅದು ಜಾಯಿಂಟ್ ಸೆಕ್ಟಾರ್ ಕಂಪನಿ ಕಾನೂನು ಪ್ರಕಾರ ಇರತಕ್ಕಂಥಾದ್ದು. ಅಲ್ಲಿ ಇರತಕ್ಕ ಬೋರ್ಡ್ ಆಫ್ ಡೈರೆಕ್ಟರ್ಸ್ ಏನಿದ್ದಾರೆ, ಅವರು ಕಂಪನಿ ಲಾ ಪ್ರಕಾರ ಕೆಲಸ ಮಾಡುತ್ತಿದ್ದಾರೆ. ಅವರು ಐ.ಎ.ಎಸ್. ಅಧಿಕಾರಿಗಳು ನಿಜ. ಕಂಪನಿ ಸರ್ಕಾರದ್ದಲ್ಲ. ಕೆಲವು ಕಾರಣಗಳಿಂದ ನಮ್ಮ ಅಧಿಕಾರಿಗಳನ್ನು ಛೇರ್ಮನ್‌ಗಳಾಗಿ ಮತ್ತು ಎಂ.ಡಿ.ಗಳಾಗಿ ಇಟ್ಟಿದ್ದೇವೆ. ಶ್ರೀಮಾನ್ ದಾತಾರ್‌ರವರು ಕೂಡ ಹಾಗೇ ಇದ್ದಾರೆ. ಅಧಿಕಾರಿಗಳು ಸರ್ಕಾರಿ ಸೇವೆಯಲ್ಲಿರುತ್ತಾರೆ, ಅವರು ನಿವೃತ್ತಿ ಹೊಂದಿದ ಕೂಡಲೇ ಕಂಪನಿಗಳಿಗೆ ಛೇರ್ಮನ್ ಮಾಡುವುದಕ್ಕೆ ಹೋಗಿಲ್ಲ. ಅಲ್ಲಿ ಶ್ರೀಮಾನ್ ದಾತಾರ್‌ರವರ ಸೇವೆಯನ್ನು ವಿಸ್ತರಿಸಿಕೊಂಡಿದ್ದಾರೆ. ವರ್ಗಾವಣೆ ವಿಷಯದಲ್ಲಿ ಹೇಳುವುದಾದರೆ, ಒಂದೊಂದು ಸಾರಿ ಒಳ್ಳೆಯ ಅಧಿಕಾರಿಗಳನ್ನು ೩-೪ ವರ್ಷಗಳು ಬಿಟ್ಟರೆ, ಅವರು ಅಲ್ಲಿ ನಾಲ್ಕು ವರ್ಷಗಳಿಂದ ಇದ್ದಾರೆಂದು ಇನ್ನು ಮುಂದೆ ನೀವು ಕೇಳಬೇಡಿರಿ. ಇದಕ್ಕೆ ಒಪ್ಪಿಗೆಯೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಉದ್ದಿಮೆಗಳ ವಿಷಯದಲ್ಲಿ ಅಧ್ಯಯನ ನಡೆಸಿಕೊಂಡು ಬರಲು ಹೊರದೇಶಗಳಿಗೆ ಅಧಿಕಾರಿಗಳನ್ನು ಕಳುಹಿಸುತ್ತೀರಿ, ಅಲ್ಲಿಂದ ಬಂದಕೂಡಲೇ ಬೇರೆ ಕಡೆ ವರ್ಗ ಮಾಡುತ್ತೀರಿ, ಅಂಥ ಕೆಲಸ ಮಾಡಬೇಡಿ ಎಂದು ಅವರು ಹೇಳುತ್ತಿದ್ದಾರೆ.

ಸರ್ಕಾರಿ ಸ್ವಾಮ್ಯದ ಭಾರೀ ಪ್ರಮಾಣದ ಕೈಗಾರಿಕೆಗಳು

೬೩. (೫೧೨) ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

೧) ರಾಜ್ಯದಲ್ಲಿರುವ ಸರ್ಕಾರಿ ಸ್ವಾಮ್ಯದ ಭಾರಿ ಕೈಗಾರಿಕೆಗಳ ಒಟ್ಟು ಸಂಖ್ಯೆ ಎಷ್ಟು ?

೨) ಸದರಿ ಕೈಗಾರಿಕೆಗಳಲ್ಲಿ ಲಾಭ ಮತ್ತು ನಷ್ಟದಲ್ಲಿ ನಡೆಯುತ್ತಿರುವ ಕೈಗಾರಿಕೆಗಳೆಷ್ಟು ?

೩) ನಷ್ಟದಲ್ಲಿ ನಡೆಯುತ್ತಿರುವ ಕೈಗಾರಿಕೆಗಳನ್ನು ಲಾಭದಾಯಕವಾಗಿ ಮಾಡಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ, ಕೈಗಾರಿಕೆಗಳ ಮತ್ತು ವಿದ್ಯುತ್ ಸಚಿವರು).—

೧) ಸಾರ್ವಜನಿಕ ಕೈಗಾರಿಕೆಗಳ ೩೦ ಅಸ್ತಿಗಳಲ್ಲಿ ರೂ. ೫ ಕೋಟಿಗಿಂತ ಹೆಚ್ಚಿನ ಹಣ ಹೂಡಿಕೆಯ ಕೈಗಾರಿಕೆಗಳನ್ನು ಭಾರಿ ಕೈಗಾರಿಕೆಗಳೆಂದು ಪರಿಗಣಿಸಲ್ಪಟ್ಟಿಲ್ಲ ಅಂತಹ ೯ ಕೈಗಾರಿಕೆಗಳು ಇವೆ.

೨) ಈ ೯ ಕೈಗಾರಿಕೆಗಳಲ್ಲಿ ೧೯೮೫-೮೬ನೇ ಸಾಲಿನಲ್ಲಿ ೪ ಕೈಗಾರಿಕೆಗಳು ಲಾಭ ಗಳಿಸಿದ್ದು, ೫ ಕೈಗಾರಿಕೆಗಳು ನಷ್ಟ ಹೊಂದಿವೆ.

೩) ಸತತವಾಗಿ ನಷ್ಟದಲ್ಲಿ ನಡೆಯುತ್ತಿರುವ ಕೈಗಾರಿಕೆಗಳ ಬಗ್ಗೆ ಸರ್ಕಾರವು ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಮಹೋದ್ಯಮದ ಮೂಲಕ ಅಧ್ಯಯನಗಳನ್ನು ನಡೆಸಿ ಆಯಾಯ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಕಂಡುಬಂದ ಕುಂದುಕೊರತೆಗಳನುಸಾರವಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಿದೆ.